Geetha Shishu Shikshana Sangha (R)

# GSSS SIMHA SUBBAMAHALAKSHMI FIRST GRADE COLLEGE

KRS ROAD, MYSURU-570 016

# ಯಶಸ್ YASHAS SSFGC Weekly Newsletter

Volume -2 Issue No 38 15 FEB 2020




## ಗೀತಾ ಸಂಹಿತಾ 2020




ಆಧುನಿಕ ಜಗತ್ತಿನಲ್ಲಿ ಕೌಶಲ್ಯಧಾರಿತವಾದ ಶಿಕ್ಷಣ ಮತ್ತು ಉದ್ಯೋಗ ಪರತೆಯನ್ನು ಪ್ರತಿಯೊಂದು ಕ್ಷೇತ್ರವು ಬಯಸುತ್ತಿವೆ. ಆದ್ದರಿಂದ ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಶೋಧಿಸಿ ಗುರುತಿಸುವ ಹಾಗೂ ಕ್ರಿಯಾಶೀಲಗೊಳಿಸುವ ನಿಟ್ಟಿನಲ್ಲಿ " ಗೀತಾ ಸಂಹಿತಾ 2020" ಅಂತರ ಕಾಲೇಜು ತಾಂತ್ರಿಕ ಸಾಂಸ್ಕೃತಿಕ ಹಬ್ಬವನ್ನು ಕಾಲೇಜು ಆಯೋಜಿಸಿದೆ. ದಿನಾಂಕ 15.02.2020 ರಂದು ನಡೆಯುವ ಈ ಹಬ್ಬಕ್ಕೆ ನಗರದ ವಿವಿಧ ಕಾಲೇಜುಗಳಿಂದ ಆಗಮಿಸಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳಿಗೆ ತುಂಬು ಹೃದಯದ ಸ್ವಾಗತ.



Geetha Shishu Shikshana Sangha (R)
SIMHA SUBBAMAHALAKSHMI FIRST GRADE COLLEGE
KRS Road, Metagalli, Mysuru – 570 016

Gita Samhita 2020

In the Gracious Presence of

**Honorable Members of Managing Committee**

**Date:** 15th February, 2020, Saturday
**Time:** 9:30 AM

**Venue:** GSSS Simha Subbamahalakshmi First Grade College – Auditorium

**You are cordially invited**

Director, Principal, Staff and Students
GSSS SSFGC for Complete Education












*ALL ARE WEL COME*

**ಎಲ್ಲರಿಗೂ ಸುಸ್ವಾಗತ**



## ದರ್ಶನ್ ರಾ.ಸೇ.ಯೋ ಅತ್ಯುತ್ತಮ ಸ್ವಯಂ ಸೇವಕ

ಮೈಸೂರು ವಿಶ್ವ ವಿದ್ಯಾನಿಲಯವು 2018–19ನೇ ಸಾಲಿನ ರಾ.ಸೇ.ಯೋ ಅತ್ಯುತ್ತಮ ಸ್ವಯಂ ಸೇವಕ ಪ್ರಶಸ್ತಿಯನ್ನು ಬಿ.ಕಾಂ ವಿದ್ಯಾರ್ಥಿ ಶ್ರೀ ದರ್ಶನ್ ಅವರು ಕುಲಪತಿಗಳಿಂದ ಸ್ವೀಕರಿಸಿದರು. ಇವರೊಂದಿಗೆ ಪ್ರಾಂಶುಪಾಲರಾದ ಪ್ರೊ. ಕೆ.ಯು.ಬಸಪ್ಪ, ರಾ.ಸೇ.ಯೋ ಅಧಿಕಾರಿ ಶ್ರೀಮತಿ ಪ್ರಿಯಾಂಕ ಎಂ.ಎನ್ ಅವರುಗಳು ಪಾಲ್ಗೊಂಡಿದ್ದರು.







ರಾ.ಸೇ.ಯೋ ಪ್ರಶಸ್ತಿ ವಿಜೇತರು

## ಉದ್ಯೋಗ ಮಾಹಿತಿ ಮತ್ತು ಸಲಹೆ



ಉದ್ಯೋಗ ಯೋಜನೆ ಮತ್ತು ಸಲಹಾ ಮಾಹಿತಿಯಡಿಯಲ್ಲಿ ಬೈಜಟಿಕ್ ಕಂಪನಿಯ ಮುಖ್ಯಸ್ಥರಾದ ಶ್ರೀ ಆಶಿತ್ ಬಿ ಅವರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದರು. ಅವರು ಇಂದಿನ ಸ್ಪರ್ಧಾಜಗತ್ತಿನಲ್ಲಿ ಉದ್ಯೋಗದ ಕೊರತೆ ಎದ್ದು ಕಾಣುತ್ತಿದೆ, ಹಾಗೂ ಸ್ಪರ್ಧೆಗಳು ಏರ್ಪಡುತ್ತಿವೆ, ವಿದ್ಯಾರ್ಥಿಗಳು ಅಧ್ಯಯನದ ಮೂಲಕ ಪದವಿ ಪ್ರಮಾಣ ಪತ್ರಗಳನ್ನು ಪಡೆದರೆ ಸಾಕಾಗುವುದಿಲ್ಲ, ಇದರೊಂದಿಗೆ ಕೌಶಲ್ಯಧಾರಿತವಾದ ಶಿಕ್ಷಣ ಮತ್ತು ನೈಪುಣ್ಯತೆಯನ್ನು ಪಡೆದಾಗ ಮಾತ್ರ ಉದ್ಯೋಗಿಗಳಾಗಿ ಹೊರಹೊಮ್ಮಲು ಸಾಧ್ಯವೆಂದರು. ಅವರು ಮುಂದುವರಿದು ಅಭ್ಯರ್ಥನ ಪತ್ರಗಳನ್ನು ರಚನೆ ಮಾಡುವುದು, ಉತ್ತಮ ಭಾಷಾಜ್ಞಾನ, ಅಧಿಕಾರಿಗಳೊಂದಿಗೆ ಉತ್ತಮವಾದ ಸಂವಾದ, ದಕ್ಷತೆ, ಮೊದಲಾದ ಮಾಹಿತಿಗಳನ್ನು ಅವರು ನೀಡಿದರು.



ಮುಂದಿನ ಶೈಕ್ಷಣಿಕ ವರ್ಷದ ಮಾಹಿತಿ ಕೈಪಿಡಿ ಮತ್ತು ಜಾಹಿರಾತುಗಳಿಗಾಗಿ ವಿದ್ಯಾರ್ಥಿಗಳ ಛಾಯಚಿತ್ರ ಕಾರ್ಯಕ್ರಮವು 11.02.2020 ರಂದು ನಡೆಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡರು.



FISA ಪದಾಧಿಕಾರಿಗಳೊಂದಿಗೆ ಶೈಕ್ಷಣಿಕ ಸಹಕಾರ ಮತ್ತು ಅಂತರಾಷ್ಟ್ರೀಯ ಸಂಬಂಧಗಳ ಬಲವರ್ಧನೆಯ ಕುರಿತು ನಿರ್ದೇಶಕರು ಮಾತುಕತೆ ನಡೆಸಿದರು. ಅಧ್ಯಕ್ಷರಾದ ಶ್ರೀ ಶೈರಸ್ ಜಬೋಲಿ , ಉಪಾಧ್ಯಾಕ್ಷರಾದಶ್ರೀ ಮಿಲೋನಿ ವಿ ಝಿತಾ, ಮತ್ತು ಸೈಫ್‌ಸುಲೇಮಾನ್, ಸೈಯದ್ ಗೋರ್ಷದ್ ಗರೋಬಿ ಇವರು ಭಾಗವಹಿಸಿದರು.

**Chief Editor**
Prof K U Basappa, Principal
**Executive Editor**
Mr Subramanya K R, HOD, Dept of BBA
Mr Mahadeva K M., HOD, Dept of Kannada

**Photo courtesy**

Dr. Prabhakara K V, Priyanka M N
Prof Anil M, Namith P

**P HOTO CORNER**

